# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಗೋವಿಂದರಾಜು ಇವರು ನಿಯಮ-72ರಡಿ ಕೋಲಾರ ನಗರದ ಎಸ್.ಎನ್.ಆರ್ ಜಿಲ್ಲಾ ಆಸ್ಪತ್ರೆ ಆವರಣದಲ್ಲಿ 03 ಅಂತಸ್ತಿನ 50 ಹಾಸಿಗೆಗಳ ನಿರ್ಣಾಯಕ ಆರೈಕೆ ಘಟಕವನ್ನು ಆಯುಷ್ಮಾನ್ ಭಾರತ್ ಯೋಜನೆಯಡಿ ರೂ.13.18 ಕೋಟಿಗಳ ವೆಚ್ಚದಲ್ಲಿ ನಿರ್ಮಾಣ ಮಾಡಲು ದಿನಾಂಕ:18-12-2022ರಂದು ಮೆ|| ಎಸ್.ಆರ್. ಕನ್ಸ್ಟ್ರಕ್ಷನ್ ಕಂಪನಿ ಬೆಂಗಳೂರು ರವರಿಗೆ ಕಾರ್ಯಾದೇಶವನ್ನು ನೀಡಿ 06 ತಿಂಗಳು ಕಳೆದಿದ್ದರೂ ಈವರೆಗೆ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳದೇ ಇದ್ದು, ಈ ಸಂಸ್ಥೆಯನ್ನು ಅನರ್ಹಗೊಳಿಸಿ ಬ್ಲಾಕ್ ಲಿಸ್ಟ್‌ಗೆ ಸೇರ್ಪಡೆ ಮಾಡಿ ಬೇರೆ ಆಸಕ್ತ ಮತ್ತು ಅರ್ಹ ಸಂಸ್ಥೆಗೆ ಕಾಮಗಾರಿ ಅನುಷ್ಠಾನದ ಗುತ್ತಿಗೆಯನ್ನು ನೀಡಿ, ಕೂಡಲೇ ಯೋಜನೆಯನ್ನು ಪ್ರಾರಂಭಿಸುವ ಬಗ್ಗೆ:-**

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಹೇಳಿಕೆ:-**

*****

ಕೋಲಾರ ನಗರದ ಎಸ್.ಎನ್.ಆರ್ ಜಿಲ್ಲಾ ಆಸ್ಪತ್ರೆ ಆವರಣದಲ್ಲಿ 03 ಅಂತಸ್ತಿನ 50 ಹಾಸಿಗೆಗಳ ನಿರ್ಣಾಯಕ ಆರೈಕೆ ಘಟಕವನ್ನು ನಿರ್ಮಿಸಲು ಮೆ|| ಎಸ್.ಆರ್. ಕನ್ಸ್ಟ್ರಕ್ಷನ್ ಕಂಪನಿ ಬೆಂಗಳೂರು ಇವರಿಗೆ ಕಾರ್ಯಾದೇಶ ನೀಡಲಾಗಿದೆ. ಸದರಿ ಕಾಮಗಾರಿಯ ನಿವೇಶನದಲ್ಲಿ ಮರಗಳು ಮತ್ತು ಓವರ್ ಹೆಡ್ ಟ್ಯಾಂಕ್ ಇದ್ದು, ಅರಣ್ಯ ಇಲಾಖೆ ವತಿಯಿಂದ ಮರಗಳ ತೆರವು ಕಾರ್ಯ ಮತ್ತು ಓವರ್ ಹೆಡ್ ಟ್ಯಾಂಕ್ ತೆರವು ಕಾರ್ಯ ಕೈಗೊಂಡು ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ. ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಸಹಾಯಕ ಕಾರ್ಯಪಾಲಕ ಅಭಿಯಂತರರು ಗುತ್ತಿಗೆದಾರರಿಗೆ ಸಾಮಾಗ್ರಿಗಳ ಶೇಖರಣೆ ಮತ್ತು ಮಾನವ ಸಂಪನ್ಮೂಲ ಹೆಚ್ಚಿಸಿ ಕಾಮಗಾರಿಯನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ಸಂಸ್ಥೆಗೆ ಸೂಚಿಸಲಾಗಿದೆ.

**ಆಕುಕ 49 ಎಸ್‌ಎಂಎಂ 2023**

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ**
**ಕಲ್ಯಾಣ ಸಚಿವರು**